REVIEW OF RESEARCH
ISSN: 2249-894X
UGC APPROVED JOURNAL NO. 48514
IMPACT FACTOR : 5.2331(UIF)
VOLUME - 7 | ISSUE - 3 | DECEMBER – 2017

# ರಾಯಚೂರು ತಾಲೂಕಿನ ಸಾಂಸ್ಕೃತಿಕ ವೈಭವ

ಡಾ ಶಿವಯ್ಯ
ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು.

ಸಂಸ್ಕೃತಿ ತುಂಬಾ ವಿಶಾಲವಾದ ಅರ್ಥ ವ್ಯಾಪ್ತಿಯನ್ನು ಹೊಂದಿದೆ. ಹರಪ್ಪ ಮಹೊಂಜೊದಾರ ಸಂಸ್ಕೃತಿಯಿಂದ ಇಲ್ಲಿಯವರೆಗೆ ಕಾಲಕಕ್ಕೆ ಬದಲಾಗುತ್ತಾ ಬಂದಿದಿದೆ. ಮನುಷ್ಯನ ನಡೆ, ನುಡಿ, ಆಚಾರ,ವಿಚಾರ, ಊಟ, ಉಪಚಾರ, ಉಡುಗೆ, ತೊಡುಗೆ, ಮಾತನಾಡುವ ಬಗೆ ಉಚ್ಚಾರಣೆ ಎಲ್ಲವೂ ಸಂಸ್ಕೃತಿಯನ್ನು ಅವಲಂಬಿಸಿವೆ. ಇನ್ನೊಬ್ಬರ ಜೊತೆ ನಡೆದುಕೊಳ್ಳುವ ರೀತಿ, ನೀತಿ, ಶಿಷ್ಟಾಚಾರ, ಅಲ್ಲದೆ ಅವರ ನಿಷ್ಠೆ, ಕರ್ತವ್ಯ ಪ್ರಜ್ಞೆ, ಸಮಯ ಪರಿಪಾಲನೆ, ಇವುಗಳು ಸಂಸ್ಕೃತಿಯ ಆಯಾಮಗಳಾಗಿವೆ.

ಧಾರ್ಮಿಕ ಸಂಸ್ಕೃತಿಗಳು ತುಂಬಾ ಭಿನ್ನವಾಗಿರುತ್ತವೆ. ಶೈವ, ವೀರಶೈವ, ಲಿಂಗಾಯತ, ಇಸ್ಲಾಂ, ಕ್ರೈಸ್ತ, ಶಿಖ್, ಧರ್ಮಗಳು ತಮ್ಮದೇ ಆದ ಆಚಾರ ವಿಚಾರಗಳನ್ನು ಹೋಂದಿವೆ. ಒಂದು ಜನಾಂಗಕ್ಕೆ ಮಾಂಸ ತಿನ್ನುವುದು ಸಂಸ್ಕೃತಿಯಾದರೆ ಇನ್ನೊಂದು ಧರ್ಮಕ್ಕೆ ಅದು ಅಪರಾದ. ಧರ್ಮದಿಂದ ಧರ್ಮಕ್ಕೆ ವಿವಾಹಗಳು ಕೂಡ ಭಿನ್ನವಾಗಿರುತ್ತವೆ. ಸಂಸ್ಕೃತಿ ಎಂಬ ಪದ ಇಂಗ್ಲೀಷಿನ ಕಲ್ಚರ್ ಎಂಬ ಪದದಿಂದ ನಿಷ್ಪತ್ತಿಗೊಂಡಿದೆ. ಆದರೂ ಒಂದು ನಾಡು ಪ್ರದೇಶ ಪಟ್ಟಣ ಗ್ರಾಮಗಳಿಗೆ ಭಿನ್ನವಾಗಿಇರುತ್ತದೆ.


ಅನಾದಿ ಕಾಲದಿಂದಲೂ ಮನುಷ್ಯ ಹೇಗೆ ಬದಲಾಗುತ್ತ ಅಭಿವೃದ್ಧಿ ಬಂದನೊ ಸಂಸ್ಕೃತಿಯು ಬದಲಾಕುತ್ತಬಂತು. ಸಂಸ್ಕೃತಿಗಳೆ ಹಿಂದಿನ ಕಾಲದಲ್ಲಿ ಕಾನೂನುಗಳಾಗಿದ್ದವು. ಒಂದು ಶಾಸನ ಉಲ್ಲೇಖಿಸುವ ಹಾಗೆ 'ಕರೆಯಂ ಕಟ್ಟಿಸು ಬಾವಿಯಂ ಸವಿಸು ಸ್ತ್ರೀಯಂ ಕಾಪಾಡು', "ಸರ್ವಜನ ಸುಖಿನೋ ಭವತಂ", ದ"ದಯವೇ ಧರ್ಮದ ಮೂಲವಯ್ಯ", "ಸದುವಿನಯವೇ ಸದಾಶಿವನ ಒಲುಮೆಯ್ಯ", "ಮಾತೆಂಬುದು ಜ್ಯೋರ್ತಿಂಗ" "ಕುಲಕುಲವೆಂದು ಒಡೆದಾಡುವಿರಿ ಕುಲದ ನೆಲೇನುಬಲ್ಲಿರಾ", "ಗುರುವಿನ ಗುಲಾಮನಾಗುವತನ ದೊರೆಯದಣ್ಣ ಮುಕುತಿ" ಹೀಗೆ ಧರ್ಮ ಸಹಿತ ಸಾಹಿತ್ಯದಲ್ಲಿ ಸಂಸ್ಕೃತಿ ಪರಿಕಲ್ಪನೆ ಸಿಗುತ್ತದೆ.

ಸಮುದಾಯಗಳಲ್ಲಿ ಅನೇಕ ಬಗೆಯ ಸಂಸ್ಕೃತಿಗಳಿವೆ ಲಂಬಾಣಿ, ಗೊರವರು, ಆದಿವಾಸಿ, ಎಳವರು, ವಡ್ಡರು, ಈ ಜನಾಂಗಗಳ ಉಡುಗೆ ವಿಶೀಷ್ಟವಾಗಿರುತ್ತದೆ. ಮಾತು, ಉಡುಗೆಗಳು ಅವರ ಆಚಾರ ವಿಚಾರಗಳನ್ನು ತಿಳಿಸುತ್ತವೆ. ಆಯಾ ಜನಾಂಗಗಳು ತಮ್ಮದೆ ಆದ ದೇವರ, ವಿವಾಹ, ಅಂತಿಮ ಸಂಸ್ಕಾರಗಳನ್ನು ಆಚರಿಸುತ್ತಾ ಬಂದರು ಅವುಗಳೆ ಒಂದು ಸಂಸ್ಕೃತಿಯಾಗಿ ಚಾಲ್ತಿಗೆ ಬಂದವು.

ರಾಯಚೂರಿನ ಸಂಸ್ಕೃತಿಯನ್ನು ಶಾಸನ, ಮಠ, ದರ್ಗಾ, ಜಾತ್ರೆ, ಸಂಗೀತ, ರಂಗಭೂವಿ, ಕಲೆಗಳ ಹಿನ್ನಲೆಯಲ್ಲಿ ಸಂಸ್ಕೃತಿಯ ವೈಭವವನ್ನು ಗ್ರಹಿಸಬಹುದಾಗಿದೆ.

## ಶಾಸನಗಳು

ರಾಯಚೂರಿನಲ್ಲಿ ಒಟ್ಟು 61 ಶಾಸನಗಳು. ಬಹುತೇಕ ದಾನ ಶಾಸನಗಳು, ಅರ್ವಾಚಿನ ಕಾಲದಲ್ಲಿ ಅರಸರು, ಸಾಮಂತರು, ದೇಸಾಯಿಗಳು, ದಂಡನಾಯಕರು ಗ್ರಾಮಾಗಳ, ದೇವಾಲಯಗಳ ಜೀರ್ಣೋದ್ದಾರ ಮಾಡಿದ್ದು, ಆ ಕಾಲದ ಕರಪದ್ದತಿ, ಬೆಳೆಯುವ ಬೆಳಗಳು, ಅಳತೆ ಮಾಪನಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಇದರಲ್ಲಿ ಅರ್ದದಷ್ಟು ಶಾಸನಗಳು ರಾಯಚೂರು ಪಟ್ಟಣದಲ್ಲಿವೆ. ಉರ್ದು, ಅರಬಿಕ್, ಪರ್ಷಿಯನ್ನ, ನಸ್ತಲಿಕ್, ನಸ್ಖ, ತೆಲುಗು ಬಾಷೆಗಳಿಲ್ಲಿವೆ, ದರ್ಗಾ, ದೇವಾಲಯಗಳಿಗೆ ದತ್ತಿ ನೀಡಿದ ವಿವರಗಳನ್ನು ನಿಡುತ್ತವೆ.



"ರಾಮಾಪುರದಲ್ಲಿಯ 1553 ನೇ ತೆಲುಗು ಶಾಸನದಲ್ಲಿ ರಾಮರಾಜ ಮಹಾರಾಜನು ಬಾವಿಕಟ್ಟಕಿಸಿದ್ದನ್ನು ತಿಳಿಸುತ್ತದೆ"

"ಕಾಟೆದರ್ವಾಜ ದ್ವರದ ಹಿಂಬದಿಯ ಗೊಡೆಗಡ ಇರುವ ಶಾಸನವು ಪರ್ಷಿಭಾಷೆಯ ನಸ್ಖ್ ಲಿಪಿಲ್ಲಿದ್ದು 1668–69ರಲ್ಲಿ ಮುಲ್ಲುಖಾನ್ ಹಾಫಿಜ್ ದ್ವಾರ ಕಟ್ಟಿಸಿದ ವಿವರವನ್ನು ನಿಡುತ್ತದೆ."

( ರಾಯಚೂರು ಜಿಲ್ಲೆಯ ಶಾಸನ ಸಂಪುಟದಿಂಥ ಪು.12,13, ಸಂ, ಡಾ ದೇವರಕೊಂಡಾ ರೆಡ್ಡಿ.)

## ಮಠಗಳು

ಎಲ್ಲಾ ಕಾಲದಲ್ಲಿ ಮಠಮಾನ್ಯಗಳು ಮಾನವ ಸಮಾಜಕ್ಕೆ ತನ್ನದೆ ಆದ ಕೊಡುಗೆಯನ್ನು ನೀಡುತ್ತ ಬಂದಿವೆ. ಅದರಲ್ಲಿ ವೀರಶೈವ ಮಠಗಳು ಎಲ್ಲಾಸಮಾಜದ ಒಳತಿಗೆ ಶ್ರಮಿಸುತ್ತಾ ಬಂದಿವೆ. ಈ ವಿಚಾರಕ್ಕೆ ರಾಯಚೂರು ತಾಲೂಕ ಹೊರತಾದುದಲ್ಲ. ನಾಲ್ಕು ಗುರು ಸ್ಥಲದ ಮಠಗಳು ಎರಡು ವಿರಕ್ತ ಮಠಗಳಿವೆ ರಾಯಚೂರು ತಾಲೂಕಿನ ಆರು ಮಠಗಳು ಬಹಳ ಹಿಂದಿನ ದಿನಗಳಿಂದ ಸಮಾಜೋದ್ದಾರ ಕೆಲಸ ಕಾರ್ಯಗಳನ್ನು ಮಾಡುತ್ತ ಬಂದಿವೆ. ಶ್ರೀ 108 ಸಾವಿರ ದೇವರ ಸಂಸ್ಥಾನ ಕಿಲ್ಲೇಬೃಹನ್ಮಠ, ಬೇರೂನ್ಕಿಲ್ಲೇ ಮಠ, ಸೋಮಾರಪೇಟ ಹಿರೇಮಠ, ಮಂಗಳವಾರ ಪೇಟ ಮಠ, ಬಿಚ್ಚಾಲಿ ಸಾವಿರ ದೇವರ ಸಂಸ್ಥಾನ ಮಠ ಬಿಚ್ಚಾಲಿ, ಚೌಕಿಮಠ ಚಿಕ್ಕಸೂಗೂರು, ರಾಮಗಡ್ಡಿ ಮಠ ಕುರ್ತಕುಂದ ಎಂಬ ಮಠಗಳು ರಾಯಚೂರು ತಾಲೂಕಿನಲ್ಲಿ ಸಾಮಾಜಿಕ, ಸಾಂಸ್ಕೃತಿ, ಧಾರ್ಮಿಕ ಕಾರ್ಯಚಟುವಟಿಕೆಗಳನ್ನು ನರಂತರವಾಗಿ ನಿರ್ವಹಿಸುತ್ತ ಬಂದಿವೆ. ಈ ಮಠ ಗಳ ಸಂಕ್ಷಿಪ್ತ ಪರಿಚಯವನ್ನು ನೋಡೋಣ.

ಶ್ರೀ 108 ಸಾವಿರ ದೇವರ ಸಂಸ್ಥಾನ ಕಿಲ್ಲೇಬೃಹನ್ಮಠ, ಬೇರೂನ್ಕಿಲ್ಲೇ ಮಠ, ರಾಯಚೂರು.
ಶ್ರೀ 108 ಸಾವಿರ ದೇವರು ಷ||ಬ್ರ|| ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು
ಶ್ರೀ 108 ಸಾವಿರ ದೇವರು ಸಂಸ್ಥಾನ ಕಿಲ್ಲೇಬೃನ್ಮಠ, ಬೇರೂನ್ಕಿಲ್ಲೇ

ಈ ಶ್ರೀಮಠವು ಹನ್ನೊಂದನೆಯ ಶತಮಾನದ ಅಂತ್ಯಭಾಗ ಹನ್ನೆರಡನೆಯ ಶತಮಾನದ ಆದಿಯಲ್ಲಿ ಶ್ರೀ 108 ಸಾವಿರ ದೇವರು ಷ||ಬ್ರ|| ಲಿಂಗೈಕ್ಯ ಪರಮ ಪೂಜ್ಯ ಗುರುಪಾದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ಮಠವನ್ನು ಆರಂಭಿಸಿದರು. ಕಾಲದಿಂದಿಡಿದು ಇಲ್ಲಿಯ ವರಗೆ ಶ್ರೀ ಮಠದ ಪೀಠಾಧಿಪತಿಗಳಾಗಿ ಮಾನ್ವಿ ತಾಲೂಕಿನ ಅರೋಲಿ ಗ್ರಮದ "ಶ್ರೀ ಕೊಳಂಕಿ ಗುರುಪಾದ ಶಿವಯೋಗೀಶ್ವರ ಹಿರೇಮಠ"ದ ಮರಿದೇವರುಗಳು ವಂಶಪರೋಪರಾಗತವಾಗಿ ಅಲಕಂಕಿರಿಸುತ್ತ ಬಂದಿದ್ದಾರೆ. ಈ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಈ ಮಠದ ಸಂಸ್ಥಾಪಕರಾದ ಗುರುಪಾದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಆ ಕಾಲದಲ್ಲಿ ಬರಗಾಲದಿಂದ ಕಂಕೆಟ್ಟ ರಾಯಚೂರು ಜನರಿಗೆ ತಮಸ್ಸು ಮಾಡುವುದರ ಮೂಲಕ ಮಳೆ ತರಿಸಿ ಜನರ ಸಂಕಷ್ಟ ದೂರಮಾಡಿದ ಮಹಾ ಪುರುಷ. ತಪಸ್ಸು ಮಾಡಿದ ಆ ಸ್ಥಳವನ್ನು ಕೊಳಂಕಿಯೆಂದು ಕರೆಯುತ್ತಾರೆ. ಇಲ್ಲಿಯೆ ಇವರ ಗದ್ದಗೆಯಿದೆ. ಕೊಳಂಕಿ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟ ಒಂದುರವಾದ ಪ್ರವಾಸಿತಾಣ. ಇಲ್ಲಿಯವರಗೆ ಒಟ್ಟು 29 ಪೀಠಾಧಿಪತಿಗಳು ಆಗಿ ಹೋಗಿದ್ದಾರೆ. ಶ್ರೀ 108 ಸಾವಿರ ದೇವರು ಷ||ಬ್ರ|| ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಪ್ರಸ್ತುತ ಪೀಠಾಧಿಪತಿಗಳು. ಈ ಮಠದ ಆರಾಧ್ಯ ದೈವವೆಂದರೆ ಶಾಂಭವಿ ದೇವಿ, ಅಕ್ಕನಾಗಮ್ಮ, ಶ್ರೀ ವೀರಭದ್ರೇಶ್ವರ ದೇವರು, ರಾಮಲಿಂಗೇಶ್ವರ ದೇವರು, ಪೂಜ್ಯ ಗುರುಪಾದ ಶಿವಯೋಗಿ ಶಿವಾಚಾರ್ಯ ಗದ್ದುಗೆ, ಕೊಳಂಕಿಯ ಶ್ರೀ ಗುರುಪಾದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳ ಗದ್ದುಗೆ.

### ಸಾಮಾಜಿಕ ಕೊಡುಗೆ

ಈ ಮಠದಲ್ಲಿ ಬಡ ಜಂಗಮ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ, ವಿದ್ಯಾಭ್ಯಾಸ, ಸಮವಸ್ತ್ರ, ಪಠ್ಯ–ಪುಸ್ತಕ, ಶಾಲಾ ಶುಲ್ಕ ಬರಿಸುತ್ತಾ ಸಮಾಜ ಸೇವೆ ಮಾಡುತ್ತಿದೆ ಶ್ರೀ ಮಠ.

ಪರ ಸ್ಥಳದಿಂದ ಬಂದ ಭಕ್ತಾದಿಗಳಿಗೆ ಉಚಿತ ವಸತಿ ಮತ್ತು ಪ್ರಸಾದದ ವ್ಯವಸ್ಥೆಯು ಮಾಡುತ್ತದೆ ಶ್ರೀಮಠ.

ಜಾತಿ, ಮತ, ಪಂತ, ವರ್ಗ, ವರ್ಣ ಭೇದವಿಲ್ಲದೇ, ಹಿಂದಿನ ಶ್ರೀಗಳಂತೆ ಪ್ರಸ್ತುತ ಶ್ರೀಗಳು ಎಲ್ಲಾ ಧರ್ಮಸಭೆ ಸಮಾರಂಭಗಳಿಗೆ ಹೋಗಿ ಜ್ಯಾತ್ಯಾತೀತ, ಧರ್ಮಾತೀತ, ಪೂಜ್ಯರಾಗಿದ್ದಾರೆ.

ಉತ್ಸವ ಮತ್ತು ಜಾತ್ರೆಗಳು

ಯುಗಾದಿ ಪಾಡ್ಯಕ್ಕೆ ಪಂಚಾಂಗ ಶ್ರವಣ.

ಬಸವ ಜಯಂತಿ ಪ್ರಯುಕ್ತ ತೊಟ್ಟಲು ಕಾರ್ಯಕ್ರಮ ಮತ್ತು ಧರ್ಮಸಭೆ.

ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರಿಯಂತರ ಪುರಾಣ ಮತ್ತು ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು.

ಪ್ರತಿ ವರ್ಷ ಬಾದ್ರಪದ ಮಾಸದ ಮೂರನೇ ಭಾನುವಾರ ಕೋಳಂಕಿ ಶ್ರೀಗಳ ಜಯಂತಿ ಪ್ರಯುಕ್ತ "ಸದ್ಭಾವನಾ ಪಾದಯಾತ್ರೆ" ಪಲ್ಲಕ್ಕಿ ಸೇವೆ, ಅನ್ನ ಸಂತರ್ಪಣೆ.

ವಿಜಯ ದಶಮಿಯ ಸಂದರ್ಭದಲ್ಲಿ ನವರಾತ್ರಿಯ ಆಚರಣೆ, ನವದೇವಿಯ ಪುರಾಣ ಪ್ರವಚನ ಕುಂಕಮಾರ್ಚನೆ ಬಾಲಮುತ್ತೈದೆಯರಿಗೆ ಉಡಿ ತುಂಬುವುದು ಜೊತೆ ಅನ್ನ ಸಂತರ್ಪಣೆ.

ಕಾರ್ತಿಕ ಮಾಸದ ಶುದ್ಧ ದಶಮಿಯಂದು ಲಿಂಗೈಕ್ಯ ಪರಮ ಪೂಜ್ಯ ಗುರುಪಾದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಪುಣ್ಯಾರಾಧನೆ ನಿಮಿತ್ಯ ದೀಪೋತ್ಸವ, ಧರ್ಮಸಭೆ, ಪೂಜ್ಯರ ಆರ್ಶಿವಚನ ಜರುಗುತ್ತವೆ.

ಎಂಟುನೂರು ವರ್ಷಗಳಿಂದ ಶ್ರೀಮಠವು ತನ್ನನ್ನೂ ಸಮಾಜ ಸೇವೆಗೆ ತೊಡಗಿಸಿ ಕೊಮಡಿದೆ. ರಾಯಚೂರು ಕೋಟೆ ಕಟ್ಟಿಸಿದ ರಾಣಿ ರುದ್ರಾಂಭೆಗೆ ಶ್ರೀ ಮಠದ ಪೂಜ್ಯರು ಲಿಂಗದಿಕ್ಷೆ ನಿಡಿದರು ಎಂಬ ಪ್ರತಿತಿ ಇದೆ. ಇದಕ್ಕ ಸಂಭಂದಿಸಿಸ ಚಿತ್ತವೊಂದು ಮಠದಲ್ಲಿದೆ ಅದರಂತೆ ಹೈದ್ರಾಬಾದಿ ಸಾರಲಗಂಜ ವಸ್ತು ಸಂಗ್ರಾಲಯದಲ್ಲಿದೆ ಎಂದು ಶ್ರೀಗಳು ಹೇಳುತ್ತಾರೆ. ಆದರೆ ಇನ್ನೂ ಹೆಚ್ಚಿನ ಸಂಶೋಧನೆಯಿಂದ ಸ್ಪಷ್ಟತೆ ಬರಬೇಕಾಗಿದೆ.

(ಶ್ರೀ 108 ಸಾವಿರ ದೇವರು ಷ||ಬ್ರ|| ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಇವರಿಂದ ಮಾಹಿತಿಯನ್ನು ಪಡೆಯಲಾಗಿದೆ.)

ಸೋಮವಾರ ಪೇಟೆ ಹಿರೇಮಠ
ಅಭಿನವ ಶ್ರೀ ಷ||ಬ್ರ|| ರಾಚೋಟಿವೀರ ಶಿವಾಚಾರ್ಯರು
ಸೋಮವಾರ ಪೇಟೆ ಹಿರೇಮಠ
ಸೋಮವಾರ ಪೇಟೆ
ರಾಯಚೂರು.

ಈ ಮಠಕ್ಕೆ ಇಲ್ಲಯವರೆಗೆ ಹನ್ನೆರಡು ಪೀಠಾಧಿಪತಿ ಹಾಗಿಹೊಹಿದ್ದಾರೆ. ಸಮಾರು ಆರು ನೂರು ವರ್ಷಗಳ ಹಿತಿಹಾಸ ಈ ಮಠಕ್ಕದೆ ಎಂದು ಊಹಿಸಬಹುದು. ಮಠವು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಈ ಮಠದ ಶಾಖಾಮಠ ಮಾನವಿ ತಾಲೂಕಿನ ಅತ್ತನೂರಿನಲ್ಲಿದೆ. ರಾಯಚೂರಿನ ಪಂಚಲಿಂಗೇಶ್ವರ ದೇವಾಲಾಯ ಮಠದಡಿಯಲ್ಲದೆ.

ಮಠವು ಸಾಂಕೃತಿವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡುತ್ತ ಸಮಾಜ ಮುಖಿಯಾಗಿದೆ.

ಪ್ರತಿ ವರ್ಷ ಬೇಸಿಗೆಯ ರಜೆಯಲ್ಲಿ ವೇದಾಧ್ಯಯನ ಶಿಬಿರ, ಜಂಗಮ ವಟುಗಳಿಗೆ ಸಂಸ್ಕಾರ ಶಿಬಿರ, ಪ್ರತಿ ಸೋಮವಾರ ಶಿವಾನುಭವ ಗೊಷ್ಠಿ ಶ್ರಾವಣ ಮಾಸದಲ್ಲಿ ಪುರಾಣ–ಪ್ರವಚನ ಮತ್ತು ಸಾಮೋಹಿಕ ಇಷ್ಟಲಿಂಗ ಪೂಜೆ ಜರುಗುತ್ತವೆ. ದಸರಾ ಸಂದರ್ಭದಲ್ಲಿ ದೇವಿ ಪುರಾಣ ಅನ್ನ ಸಂತರ್ಪಣೆ ನಡೆಯುತ್ತದೆ. ಯುಗಾದಿ ದಿನದಂದು ಪಂಚಾಂಗ ಪಠಣ ಜರುಗುತ್ತದೆ.

ಶಾಖಾಮಠವಾದ ಅತ್ತನೂರಿನಲ್ಲಿ ಲಿಂಗೈಕ್ಯ ಪರಮ ಪೂಜ್ಯ ರಾಚೋಟಿವೀರ ಶಿವಾಚಾರ್ಯರ ಪುಣ್ಯ ಸ್ಮರಣೆ ನಿಮಿತ್ಯವಾಗಿ ಪುರಾಣ–ಪ್ರವಚನ ಜರುಗುತ್ತದೆ. ಮಠದ ಆರು ಎಕರೆ ಜಮಿನಿನಲ್ಲಿ ಒಂದು ದೊಡ್ಡ ಕೆರೆಯನ್ನು ನಿರ್ಮಿಸಿ ಅಲ್ಲಿ ನೀರನ್ನು ಸಂಗ್ರಹಿಸಿ ಗ್ರಾಮದ ಜನರಿಗೆ ಜೀವ ಜಲ ನೀಡುವ ಪುಣ್ಯದ ಕಾರ್ಯವನ್ನು ಶ್ರೀಮಠ ಮಾಡುತ್ತಿರುವುದು ಸ್ತುತ್ತಾರ್ಹವಾಗಿದೆ. ಹಿಂದಿನ ಕಾಲದಿಂದಲೂ ಅನೇಕ ಜನರು ಮಠದ ಆಶ್ರಯ ಪಡೆದು ಶಿಕ್ಷಣವಂತರಾಗಿ ದೊಡ್ಡ ದೊಡ್ಡ ಹುದ್ಯೆಯಲ್ಲಿದ್ದಾರೆ. ಇದು ಶ್ರೀಮಠದ ಶ್ರೀಮಂತಿಕೆಗೆ ಹಿಡಿದ ಕನ್ನಡಿ. ಪಸ್ತುತವಾಗಿ ಈ ಮಠವನ್ನು ಹಿಂದಿನ ಪರಂಪರೆಯಂತೆ ಪೂಜ್ಯರಾದ ಅಭಿನವ ಶ್ರೀ ರಾಚೋಟಿವೀರ ಶಿವಾಚಾರ್ಯರು ಮುಂದು ವರಿಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ.

(ಶ್ರೀ ಷ||ಬ್ರ|| ರಾಚೋಟಿವೀರ ಶಿವಾಚಾರ್ಯರು ಇವರಿಂದ ಮಾಹಿತಿಯನ್ನು ಪಡೆಯಲಾಗಿದೆ)

ಸಾವಿರ ದೇವರ ಸಂಸ್ಥಾನ ಮಠ ಬಿಚ್ಚಾಲಿ ಮಟಮಾರಿ ಗಬ್ಬೂರು ಕಡಗಂಚಿ
ವೀರತಪಸ್ವಿ ಷ.ಬ್ರ. ಶ್ರೀ ವೀರಭದ್ರ
ಶಿವಾಚಾರ್ಯ ಮಹಾಸ್ವಮಿಗಳು
ಬಿಚ್ಚಾಲಿ, ಮಟಮಾರಿ, ಗಬ್ಬೂರು

ಸಾವಿರ ದೇವರ ಸಂಸ್ಥಾನ ಮಠ ಬಿಚ್ಚಾಲಿ ಒಂದು ಪುರಾತನ ಮಠವಾಗಿದೆ. ಒಂದು ಸಾವಿರ ಮಠಗಳು ಈ ಮಠದ ಅಧಿನದಲ್ಲಿವೆ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಅನೇಕ ಸಮಾಜಮೂಖಿ ಕಾರ್ಯಗಳನ್ನು ಮಾಡುತ್ತ ಬಂದಿದೆ ಶ್ರೀ ಮಠವು.

ಈ ಮಠದ ಒಂದು ವಿಷೇಶವೆಂದರೆ ಪ್ರತಿ ವರ್ಷವು ಒಂದೊಂದು ಕಡೆ ಪಂಚಪೀಠಾಧಿಶರ ಅಡ್ಡ ಪಲ್ಲಕ್ಕಿ ಮಹತ್ಸೋವನ್ನು ನಿರಂತರವಾಗಿ ಮಾಡುತ್ತ ಬಂದಿದೆ. ಅದರಂತೆ ದಸರಾ ದರ್ಬಾರನ್ನು ಕೂಡ ಮಾಡುತ್ತ ಬಂದಿದೆ. ಇಂತಹ ವಿಷೇಶತೆಯಿಂದ ಕೂಡಿದ ಶ್ರೀಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿದೆ.

ಲಿಂಗೈಕ್ಯ ಷ.ಬ್ರ.ಚನ್ನವೀರ ಶಿವಾಚಾರ್ಯರ ಕಾಲದಲ್ಲಿ ಅನೇಕ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಂಗೀತ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ನಾಡಿನ ಹೆಸರಾಂತ ಸಾಹಿತಿಗಳನ್ನ, ಸಂಗೀತಗರನ್ನ ಕರೆಹಿಸಿ ಗೌರವಿಸಿದ್ದುಂಟು. ಇದೇ ಮಠದ ಶಾಖಾ ಮಠವಾದ ಮಟಮಾರಿಯ ಮಠದಲ್ಲಿ ಪ್ರತಿ ವರ್ಷ ಶ್ರವಣ ಮಾಸದಲ್ಲಿ ಪುರಾಣ–ಪ್ರವಚನಗಳು ಜರುತ್ತವೆ. ಶ್ರೀ ಮಠದ ವತಿಯಿಂದ ಅನೇಕ ಸಲ ಸಾಮೋಹಿಕ ವಿವಾವಗಳು ಜರುಗಿವೆ. ಕೆಲ ದಿನಗಳ ಹಿಂದೆ ಅಲ್ಕೂರಿನಲ್ಲಿ ದ್ವಾದಶ ಲಿಂಗಗಳನ್ನು ಪ್ರತಿಷ್ಠಾಪಿಸಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿಯ ಮಹೋತ್ಸವನ್ನು ಮಾಡಿದ್ದಾರೆ. ಬಿಚ್ಚಾಲಿ ಮಟಮಾರಿ ಗಬ್ಬೂರು ಮತ್ತು ಕಲಬುರಗಿಯ ಕಡಗಂಚಿ ಮಠಗಳು ಶ್ರೀಮಠದ ಶಾಖಾಮಠಗಳಾಗಿ ಪ್ರಸಿದ್ಧಿಯನ್ನು ಪಡೆದಿವೆ. ಪ್ರಸ್ತುತವಾಗಿ ಸಪ್ತಮಠಾಧೀಶ್ವರ ವೀರತಪಸ್ವಿ ಷ.ಬ್ರ. ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಮಿಗಳ ನೆತೃತ್ವದಲ್ಲಿ ಮೇಲೆ ಹೇಳಿದ ಎಲ್ಲಾ ಚಟುವಟಿಕೆಗಳು ಸಾಂಗವಾಗಿ ಇಂದಿಗೂ ಜರುಗುತ್ತಿವೆ. (ಷ.ಬ್ರ. ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಮಿಗಳು ಇವರಿಂದ ಮಾಹಿತಿಯನ್ನು ಪಡೆಯಲಾಗಿದೆ)

ಮಂಗಳವಾರ ಪೇಟ ಹಿರೇಮಠ (ಉಡಮಗಲ್–ಖಾನಾಪೂರ–ಆಸಾಪೂರ)
ಶ್ರೀ ವೀರಸಂಗಮೇಶ್ವರ ಮರಿದೇವರ
ಮಂಗಳವಾರ ಪೇಠ ಹಿರೇಮಠವು ತಾಲೂಕಿನ ಉಡಮಗಲ್,
ಖಾನಾಪೂರ ಮತ್ತು ಆಸಾಪೂರ.

ಮಂಗಳವಾರ ಪೇಠ ಹಿರೇಮಠವು ತಾಲೂಕಿನ ಉಡಮಗಲ್, ಖಾನಾಪೂರ ಮತ್ತು ಆಸಾಪೂರಗಳಲ್ಲಿ ಶಾಖಾಮಠವನ್ನು ಹೋದಿದೆ. ಇದುವರೆಗೆ ಏಳು ಪೀಠಾಧಿಪತಿಗಳು ಹಾಗಿಹೋಗಿದ್ದಾರೆ. ಅಂದರೆ ಸಮಾರು ನಾಲ್ಕು ನೂರು ವರ್ಷಗಳ ಹಳೆಯ ಮಠ ಎಂದು ಹೇಳಬಹುದು. ಈ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿದೆ.

ಈ ಮಠದಿಂದ ಪ್ರತಿ ಶ್ರಾವಣ ಮಾಸದಲ್ಲಿ ನಂದಿ ಪುರಾಣ–ಪ್ರವಚನ ಜರುಗುತ್ತದೆ. ಅದರಂತೆ ಗಣೇಶ ಚತುರ್ಥಿ, ದಸರಾ ಹಬ್ಬದ ಸಂದರ್ಭದಲ್ಲಿ ಒಂಭತ್ತು ದಿನಗಳ ದೇವಿ ಪುರಾಣ ನೆರವೇರುತ್ತದೆ. ಮೊದಲಿ ಶ್ರೀಗಳು ಜನರಲ್ಲಿ ಭಕ್ತಿ ಭಾವ ಮೂಡಿಸಲು, ಆಧ್ಯಾತ್ಮದ ಅರಿವು ಅರಿಯಲು ಜನರೊಡಗೂಡಿ ಶ್ರೀಶೈಲಕ್ಕೆ ಪಾದಯಾತ್ರೆ ಮಾಡುತ್ತಿದ್ದರು. "ಶ್ರೀರಾಜಯೋಗಿ ರಾಚೋಟೇಶ್ವರ ಯುವ ಚೇತನ ಶಕ್ತಿ" ಯುವಕ ಮಂಡಳಿ ಮತ್ತು ರಾಯಚೂರು ರೋಟರಿ ಕ್ಲಬ್ ಗಳ ಸಹಯೋಗದಲ್ಲಿ ಉಚಿತ ನೇತ್ರ ಚಿಕಿತ್ಸ ಶಿಬಿರಗಳನ್ನು ನಡೆಸುತ್ತಾ ಬಂದಿದಿದೆ. ಹಿಂದಿನ ಶ್ರೀಗಳ ಆರಾಧನಾ ಸಂದರ್ಭದಲ್ಲಿ ಉಚಿತ ಸಾಮೋಹಿಕ ವಿವಾಹಗಳನ್ನು ಮಾಡುತ್ತಾ ಬಂದಿದ್ದಾರೆ. ಪ್ರಸ್ತುತದಲ್ಲಿ ಶ್ರೀ ವೀರಸಂಗಮೇಶ್ವರ ಮರಿದೇವರ ಸಾರಥ್ಯದಲ್ಲಿ ಮಠ ಮುನ್ನಡೆಯುತ್ತಿದೆ.
( ಆಸಾಪುರದ ಶ್ರೀ ಶರಣಯ್ಯ ಸ್ವಾಮು, ಶ್ರೀ ಮಲ್ಲಿಕಾರ್ಜನ ಹೂಗಾರ ಉಡಮಗಲ್ ಖಾನಾಪುರ ಇವರಿಂದ ಮಠದ ಮಾಹಿತಿಯನ್ನು ಸಂಗ್ರಹಿಸಿದೆ.)

ಚೌಕಿಮಠ ಚಿಕ್ಕಸೂಗೂರು
ಡಾ.ಸಿದ್ಧಲಿಂಗ ಸ್ವಾಮಿಜಿಯವರು
ಚೌಕಿಮಠ ಚಿಕ್ಕಸೂಗೂರು.
ತಾ.ರಾಯಚೂರು

ಐದು ಪೀಠಾಧೀಪತಿಗಳನ್ನು ಕಂಡ ಈ ಮಠವು ವೀರಕ್ತಮಠವಾಗಿದೆ. ಸುಮಾರು 150 ವರ್ಷಗಳಷ್ಟು ಹಳೆಯದಾದ ಮಠ. ಈ ಮಠವು ಬಸವತೀರ್ಥಿರಿಂದ ಪ್ರಾರಂಭವಾಯಿತು ಎಂದು ಹೇಳಬಹುದು. ಹೈದ್ರಾಬಾದನಿ ನಿಜಾಮರ ಆಡಳಿತದಲ್ಲಿ ನ್ಯಾಯ–ಅನ್ಯಾಯಗಳ ತಿರ್ಮಾನಗಳು ಈ ಚೌಕಿಯಲ್ಲಿ ನಡೆಯುತ್ತಿದ್ದರಿಂದ ಈ ಮಠಕ್ಕೆ ಚೌಕಿಮಠ ಎಂಬ ಪ್ರತಿಥಿಯಿದೆ. ಕಲ್ಲಿನಲ್ಲಿ ಕೆತ್ತಲ್ಪಟ್ಟ ಸುಂದರವಾದ ಮಠವಾಗಿದೆ. ರಾಯಚೂರು ಮತ್ತು ಹೊಸಪೇಟೆ ಹಾಗೂ ಕೊರ್ತಕುಂದಾ ರಾಮಗಡ್ಡಿ ಮಠಗಳು ಈ ಮಠದ ಶಾಖಾಮಠಗಳು. ವಿಜಯದಶಮಿಯ ನಂತರ 10ನೆಯ ದಿನವಾದ ನೋತರ ಆಶ್ವೀಜ ಬಹಳ ಪಂಚಮಿಯ ದಿನದಂದು ಶ್ರೀ ಸಿದ್ಧರಾಮೇಶ್ವರ ಜಾತ್ರೆ ನಡೆಯುತ್ತದೆ. ಸಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ತನ್ನನ್ನೂ ತೊಡಗಿಸಿಕೊಂಡಿದೆ.

ಇಲ್ಲಿ ಬಡ ಮಕ್ಕಳಿಗೆ ಉಚಿವಾದ ಶಿಕ್ಷಣ, ಉಚಿತವಾದ ವಸತಿ, ಉಚಿತವಾದ ವಸ್ತ್ರಗಳನ್ನು ನೀಡುತ್ತ ಅನೇಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಕಾರಣವಾಗಿದೆ. ಬಂದ ಭಕ್ತಾದಿಗಳಿಗೆ ನಿತ್ಯ ದಾಸೋಹದ ನಡೆಯುತ್ತದೆ. ಒಂದು ಸಿ,ಬಿ.ಸಿ. ಪ್ರಾಥಮಿಕ ಶಾಲೆ, ಪ್ರೌಡ ಶಾಲೆ, ಮತ್ತು ಆಯ್.ಆಯ್.ಟಿ ಕಾಲೇಜುಗಳು ಈ ಮಠದಡಿಯಲ್ಲಿ ನಡೆಯುತ್ತಿವೆ. ವೀರಕ್ತಮಠ ಮಹಾಗಾಂವ, ಕಲಬುಗಿ ಜಿಲ್ಲೆ, ವೀರಕ್ತಮಠ ನೀವರಗಿ, ಇಚಿಡಿ ತಾಲೂಕ, ವಿಜಯಪುರ ಜಿಲ್ಲೆ ಮತ್ತು ನೆರೆ ರಾಜ್ಯವಾದ ಆಂದ್ರಪ್ರದೇಶದ ಸದಾಶಿವಪೇಟೆ ಜಗದ್ಗುರು ಪೀಠ, ಮೇದಕ್ ಜಿಲ್ಲೆ. ಇಷ್ಟು ಮಠಗಳನ್ನು ಹೋದಿದೆ. ಇಂಗಳೇಶ್ವರ ಮಠವು ಈ ಮಠದ ಮೂಲ ಮಠವಾಗಿದೆ. ಡಾ.ಸಿದ್ಧಲಿಂಗ ಸ್ವಾಮಿಜಿಯವರು ಈಗ ಈ ಮಠದ ಪೀಠಾಧೀಪತಿಯಾಗಿ ಮುನ್ನೆಡೆಸುತ್ತಿದ್ದಾರೆ. (ಡಾ.ಸಿದ್ಧಲಿಂಗ ಸ್ವಾಮಿಜಿಯವರು ಇವರಿಂದ ಮಠದ ಮಾಹಿತಿಯನ್ನು ಸಂಗ್ರಹಿಸಿದೆ.)

ರಾಮಗಡ್ಡಿ ಮಠ
ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ರಾಮಗಡ್ಡಿ ಸಂಸ್ಥಾನ ಮಠ
ತಾ.ರಾಯಚೂರು.

ರಾಮಗಡ್ಡಿ ಮಠವು ಕೃಷ್ಣೆ ಭೀಮೆಯರ ತೋಳತಕ್ಕೆಯಲ್ಲಿದೆ. ಈ ಮಠವು ಸುಮಾರು ಎಂಟು ನೂರು ವರ್ಷಗಳಷ್ಟು ಹಳೆಯದಾಗಿದೆ. ಈ ಮಠದ ಮೊದಲ ಪುಜ್ಯರಾದ ಶ್ರೀ ಚೋಳೆಂದ್ರ ಮಹಾಸ್ವಾಮಿಗಳು ದೇವಸೂಗೂರಿನ ಸೂಗೂರೇಶ್ವರ ಸಮಕಾಲಿನರು ಎಂದು ಹೇಳುತ್ತಿರುವುದರಿಂದ ಈ ಮಠದ ಕಾಲ ಎಂಟು ನೂರು ವರ್ಷಗಲ ಹಿಂದಕ್ಕೆ ಸರಿಯುತ್ತದೆ. ಹಿಂದಿನ ಕಾಲದ ಸಂದರ್ಭದಲ್ಲಿ ಈ ಮಠವು ಒಂದು ಶಿವಯೋಗ ಮಂದಿರದ ಪಾಠಶಾಲವಾಗಿತ್ತು ಎಂದು ಹೇಳುತ್ತಾರೆ ಅಲ್ಲಿಯ ಪೂಜ್ಯರು. ಯುಗಾದಿ ಮತ್ತು ಸಂಕ್ರಾಂತಿಗೆ ಮಠದಲ್ಲಿ ಪುರಾಣ–ಪ್ರವಚನಗಳು ಜರುಗುತ್ತವೆ. ಹದಿನಾರನೇಯ ವೀರಶೈವ ಮಹಾಸಭೆಯ ಸಭೆಯು ಈ ಮಠದಲ್ಲಿಯೆ ಜರುಗಿದ್ದು ಇಂದು ಇತಿಹಾಸ.

ಶ್ರೀ ಚೋಳೇಂದ್ರ ಮಹಾಸ್ವಾಮಿ ಪ್ರೌಢಶಾಲೆಯಿಂದ ಮಠವು ಶೈಕ್ಷಣಿಕ ಸೇವೆಗಯ್ಯುತ್ತಿದೆ. ಈಗಿನ ಪೂಜ್ಯರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಇಪ್ಪತ್ನಾಲ್ಕು ಕೃತಿಗಳನ್ನು ನಾಡಿಗೆ ನೀಡುವುದರ ಮೂಲಕ ರಾಜ್ಯ ಪ್ರಶಸ್ತಿಗೆ ಬಾಜನಾಗಿದ್ದಾರೆ. ಇವರೊಬ್ಬ ಬಂಡಾಯ ಸಾಹಿತಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಇದೊಂದು ಅಪ್ಪಟ ಶರಣ ಸಂಸ್ಕೃತಿಯ ಮಠವಾಗಿದೆ.

### ರಂಗಭೂಮಿ

ಸಮುದಾಯ : ವ್ಹಿ ಎನ್ ಹಕ್ಕಿ ತಿನಕಂದಿಲ, ರಸಗಂಗಾಧರ,
ರಂಗಕನುಸು : ಲಕ್ಷ್ಮಣ ಮಂಡಲಗೆರಾ ಬಹದ್ದೂರ್ ಗಂಡು, ಕಡ್ಲಿಮಟ್ಟಿ ಕಾಸಿಬಾಯಿ, ಪೇಯಿಂಗ್ ಗೆಸ್ಟ್
ರಂಗಮಿತ್ರ : ಅಲ್ತಾಫ
ಬಯಲಾಟ : ರಾಯಚೂರಿನ ಸುತ್ತಮತ್ತ ಹಳ್ಳಿಗಳಲ್ಲಿ ಎಳ್ಳಾಮಾಸೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ದೇವಿ ಬಯಲಾಟ, ದೊಡ್ಡಾಟ ಹಾಡುತ್ತಾರೆ.
ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಬಂಡಾಯದ ನಾಟಕಗಳನ್ನು ಪ್ರದರ್ಶಿಸುತ್ತಾರೆ.

### ಸಂಗೀತ

ಸಂಗೀತ ಕ್ಷೇತ್ರಕ್ಕೆ ರಾಯಚೂರು ತನ್ನದೆ ಆದ ಕೊಡುಗೆಯನ್ನು ನೀಡಿದೆ. ಸಂಗೀತ ಎರಡು ದಿಗ್ಗಜಗಳು ಎಂದರೆ ಸಿದ್ಧರಾಮ ಜಂಬಲದಿನ್ನಿ, ಪಂಡಿತ ನರಸಿಂಹ ವಡವಾಟಿ ಇವರುಗಳು ಕರ್ನಾಟಕ, ಭಾರತಿಯ, ಶಾಸ್ತ್ರೀಯ ಸಂಗೀತಗಳನ್ನು ಹಾಡುವುದರ ಮುಖಾಂತ ಪ್ರಸಿದ್ಧರಾದವರು. ಇವರಲ್ಲದೆ ಸುಗುರೇಶ ಅಸ್ಕಿಹಾಳ, ಶರಣಪ್ಪ ಗೋನಾಳ, ಶಾಂತ ಜಯತಿರ್ಥ, ಗಜಲ್ ಗುಂಡಮ್ಮ, ಕರಿಯಪ್ಪ ಮಾಸ್ಟರ್, ಶೇಷಗಿರಿದಾಸ, ಲಕ್ಷ್ಮೀರಡ್ಡಿ, ಗೊಪಾಲ ಗುಡಿಬಂಡಿ, ಪ್ರಹ್ಲಾದ, ಸಮೀರಣ ಜೋಷಿ ಇನ್ನೂ ಅನೇಕರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

### ಜಾತ್ರೆಗಳು

ದೇವಸೂಗುರಿನ ಸೂಗುರೇಶ್ವರ ಜಾತ್ರ ಕಾರ್ತಿಕಮಾಸದಲ್ಲಿ ಜರುಗುತ್ತದೆ. ಈ ಜಾತ್ರೆಯಲ್ಲಿ ವೀರಗಾಸೆ, ಪುರವಂತಿಗೆ, ದೇವರ ಸೇವೆ, ಮದುವೆಯ ಗುಗ್ಗಳ, ದೇವರ ಗಂಗಾಸ್ನಾನ ಉತ್ಸವಗಳಲ್ಲಿ ಜರುಗುತ್ತವೆ. ಆಂದ್ರಪ್ರದೇಶ, ತೆಲಂಗಾಣ, ಕರ್ನಾಟಕದ ಭಕ್ತರು ಅನೇಕ ಸಂಖ್ಯೆಯಲ್ಲಿ ಬರುತ್ತಾರೆ.

ಮಟಮಾರಿ ಶ್ರೀ ವೀರಭದ್ರೇಶ್ವರ ಜಾತ್ರೆಯು ಪ್ರತಿ ಜನವರಿಯಲ್ಲಿ ಜರುತ್ತದೆ. ನಂದಿಕೋಲು ಉತ್ಸವ, ಪುರವಂತಿಗೆ, ರಥೋತ್ಸವ ಜರುತ್ತದೆ.

ಪ್ರತಿ ಶ್ರಾವಣ ಮಾಸದ ಪಂಚಮಿಯಂದು ಕಲ್ಮಲಾ ಕರಿಯಪ್ಪ ತಾತನ ಜಾತ್ರೆ ಜರುತ್ತದೆ. ಒಂದು ತಿಂಗಳ ಕಾಲ ನಡೆಯುತ್ತದೆ.

ಹರಿಜಾನ ವಾಡದ ಮಾರೆಮ್ಮ ದೇವಿ, ತಿಮ್ಮಾಪುರ ಪೇಟೆಯ ಮಾರೇಮ್ಮ ದೇವಿ, ಕಂದಗಡ್ಡೆ ಮಾರೆಮ್ಮ ಜಾತ್ರೆ. ದಸರಾ ಸಂದರ್ಭದಲ್ಲಿ ನವರಾತ್ರಗಳನ್ನು ಇಲ್ಲಿ ಅತಿ ವಿಜ್ರಮಣೆಯಿಂದ ಜರುತ್ತದೆ. ಅಲ್ಲಿಯ ವಟಾರದ ಹೆಣ್ಣು ಮಕ್ಕಳು ತುಂಬಾ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ. ಅಲ್ಲದೆ ಪಂಚಮುಖಿಯ ಪಂಚಮುಖಿ ಹನಮ ಜಾತ್ರೆ ಕೂಡ ಒಂದು.

### ಉರ್ಸುಗಳು

ಹಜರತ್ ಬಡೇಸಾಬ್ ದರ್ಗಾ ನಡೆದರೆ ಜನವರಿ ತಿಂಗಳಲ್ಲಿ, ಶಂ ಸಲಾಂ – ಶಾಲಂ ವಾಲೇಶ ಸಪ್ಟಂಬರ್ ತಿಂಗಳಲ್ಲಿ ಈ ಎರಡು ಉರ್ಸುಗಳು ಭಾವೈಕ್ಯತೆಯ ಸ್ಥಳಗಳಾಗಿವೆ, ಮುಸ್ಲಿಂರು ಎಷ್ಟೂ ಹೋಗುತ್ತಾರೆ ಅಷ್ಟೇ ಹಿಂದುಗಳು ಹೋಗುತ್ತಾರೆ.

### ಸಾಂಸ್ಕೃತಿ ಲೋಕ

ಮುನ್ನರು ಕಾಪು ಸಮುದಾಯದವರ ಮುಂಗಾರು ಸಾಂಸ್ಕೃತಿಕ, ದಸರಾ ಸಾಂಕೃತಿಕ ಉತ್ಸವ,

ಬಾರ ಎತ್ತುವ ಸಂಗ್ರಾಣಿ ಕಲ್ಲು ಎತ್ತುವ, ಎತ್ತುಗಳಿಂದ ಬಾರ ಎಳೆಯುವ ಸ್ಪರ್ದೆ, ಅನೇಕ ಕಲಾ ತಂಡಗಳಿಂದ ನೃತ್ಯ ನಾಟಕ ಪ್ರದರ್ಶನ,

ಹಳ್ಳಿಗಳಲ್ಲಿ ಜೋಕುಮಾರ ಸ್ವಾಮಿ ಬಯಲಾಟ, ದ್ಯಾವಮ್ಮ, ದರ್ಗಮ್ಮ, ನವರಾತ್ರಿ ಸಂದರ್ಭದಲ್ಲಿ ಗೌಳಿ ಸಮುದಾಯದ ನವರಾತ್ರಿ ಉತ್ಸವದಲ್ಲಿ ಕೋಲಾಟ. ವೀರಶೈವ ಮಠಗಳಲ್ಲಿ 9ದಿನ ದೇವಿ ಪುರಾಣ, ಶ್ರಾವಣ ಮಾಸದಲ್ಲಿ ಪ್ರುರಾಣ ಪ್ರವಚನ, ಹರಿಜನ ವಾಡ ತಿಮ್ಮಾಪುರಪೇಟಯ ಕಂದಗಡ್ಡಿ ಮಾರೆಮ್ಮ ಉತ್ಸವ, ವೀರಭದ್ರ ದೇವರ ಉತ್ಸವ.

**ಜಾತ್ರೆಗಳು** : ದೇವಸೂಗುರು ಸೂಗುರೇಶನ ಜಾತ್ರೆ, ಮಟಮಾರಿಯ ವೀರಭದ್ರೇಶ್ವರ ಜಾತ್ರೆ,

**ಸಾಹಿತ್ಯ**

ರಾಯಚೂರು ತಾಲೂಕು ಎಲ್ಲಾಪ್ರಕಾರದ ಸಾಹಿತ್ಯವನ್ನು ನಾಡಿಗೆ ನೀಡಿದೆ. ವಚನ, ಕೀರ್ತನೆ, ಕಥೆ, ಕಾವ್ಯ, ಕಾದಂಬರಿ, ವೈಚಾರಿಕ, ಬಂಡಾಯ, ದಲಿತ, ರೂಬಾಯಿ, ಹೈಕು, ಗಜಲ್, ಪ್ರವಾಸಕಥನ, ಅನುವಾದ, ಇಷ್ಟೆಲ್ಲೆ ಸಾಹಿತ್ಯದ ರೂಪಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟದ್ದು ನಮ್ಮ ಹೆಮ್ಮೆಯಾಗಿದೆ. ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಿ ಕೊಂಡಿರುವ ರಾಯಚೂರು ತಾಲೂಕು ಸಂಸ್ಕೃತಿಯಿಂದ ಶ್ರೀಮಂತವಾಗಿದೆ.

**ಸಂದರ್ಭ ಗ್ರಂಥಗಳು**

1.ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 7 (ರಾಯಚೂರು ಜಿಲ್ಲೆ)
2.ಗಂಗಾರಾಸಿ ಸಂ.ಡಾ. ಚನ್ನಬಸವ ಹಿರೇಮಠ
3.ಕರ್ನಾಟಕ ಗ್ರಾಮ ಚರಿತ್ರೆ ಕೋಶ ರಾಯಚೂರು ಜಿಲ್ಲೆ ಸಂ. ಪ್ರೊ ಡಿ.ಬಿ.ನಾಯಕ ಕಾ ತ ಚಿಕ್ಕಣ್ಣ, ಡಾ ಚಕ್ಕರೆ ಶಿವಶಂಕರ್, ಡಾ. ಚನ್ನಬಸವ ಹಿರೇಮಠ